

ಎನ್ನಿಸಿಕೊಳ್ಳಲು ಸಾಕಷ್ಟು ಪರಿಶ್ರಮ ಹಾಕಿದರು. ಇಂತಹ ಸಂದರ್ಭದಲ್ಲಿ ಇವರು ಅಭಿನಯಿಸಿದ ನಾಟಕವೊಂದನ್ನು ನೋಡಲು ಪ್ರಸಿದ್ಧ ನಟ ಬಳ್ಳಾರಿ ರಾಘವ ಅವರು ಬಂದಿದ್ದರು. ಅವರ ಅಭಿನಯ ಶೈಲಿ ನೋಡಿ ತಮ್ಮ ನಾಟಕ ಕಂಪನಿಗೆ ಆಹ್ವಾನಿಸಿದರು.

ಅಲ್ಲಿಂದ ಗೌಡರ ಕಲಾಬದುಕಿಗೆ ಇನ್ನೊಂದು ತಿರುವು ಸಿಕ್ಕಂತಾಯಿತು, ರಾಘವರ 'ಆರ್ಟ್ ಲವರ್ಸ್ ಲೀಗ್'ನಲ್ಲಿ ಪ್ರಮುಖ ನಟರಾಗಿ ಹೊರ ಹೊಮ್ಮಿದ ಅವರು ಕರ್ನಾಟಕವಲ್ಲದೆ ಆಂಧ್ರಪ್ರದೇಶದಲ್ಲೂ ಜನ ಮೆಚ್ಚುಗೆ ಗಳಿಸಿದರು. ಆರಂಭದಲ್ಲಿ ಕನಕದಾಸರಾಗಿ ಜನಪ್ರಿಯರಾಗಿದ್ದ ಇವರು ಕಬೀರ, ಚಂದ್ರಗುಪ್ತ, ನಾರದ ಮೊದಲಾದ ಪಾತ್ರಗಳಿಗೆ ಜೀವಂತಿಕೆ ತಂದುಕೊಟ್ಟರು.

ಬಳ್ಳಾರಿ ರಾಘವರು ಗೌಡರ ಪ್ರತಿಭೆಗೆ ಮತ್ತಷ್ಟು ಹೊಳಪು ತಂದರು. ನಾಟಕವಲ್ಲದೆ ಸಾಹಿತ್ಯ–ಸಂಗೀತ ವಲಯದಲ್ಲೂ ಹೆಸರು ಮಾಡಿದ ಗೌಡರು ಅಶು ಕವಿಗಳಾಗಿ, ಗಮಕಿಗಳಾಗಿ ಜನ ಮಾನಸದಲ್ಲಿ ನೆಲೆನಿಂತರು.

'ಭಕ್ತ ರಾಮದಾಸ್' ನಾಟಕದಲ್ಲಿ ಕಬೀರ, ಭಕ್ತ ಮಾರ್ಕಂಡೇಯದಲ್ಲಿ ನಾರದರಾಗಿ ದೊಡ್ಡನಗೌಡರು ನವರಸಗಳನ್ನು ಹೊಮ್ಮಿಸುವ ಅಪೂರ್ವ ಕಲಾವಿದರೆಂಬ ಅಭಿದಾನಕ್ಕೆ ಪಾತ್ರರಾದರು, ಸ್ವಂತ ಪ್ರತಿಭೆಯಿಂದ ಬೆಳಕಿಗೆ ಬಂದಿದ್ದ ಅವರಿಗೆ ಕಲಾರಂಗದಲ್ಲಿ ಪ್ರೋತ್ಸಾಹಿಸಿದ್ದ ಬಳ್ಳಾರಿ ರಾಘವರು 1946 ರಲ್ಲಿ ಕಣ್ಮರೆಯಾದ ಮೇಲೆ ಈ ಮಹಾನ್ ಕಲಾವಿದ ನೆನಪಿನಲ್ಲಿ ಕಲಾಮಂದಿರವನ್ನು ಬಳ್ಳಾರಿಯಲ್ಲಿ ನಿರ್ಮಿಸಲು ನಾಡಿನಾದ್ಯಂತ ನಾಟಕಗಳನ್ನು ಪ್ರದರ್ಶಿಸಿ ಹಣ ಹೊಂದಿಸಿದರು.

ಕರ್ನಾಟಕ ಏಕೀಕರಣ ಆಂದೋಲನ ಜಾರಿಯಲ್ಲಿದ್ದ ಆ ಕಾಲ ಘಟ್ಟದಲ್ಲಿ ಅದರಲ್ಲೂ ಸಕ್ರಿಯರಾಗಿದ್ದ ಗೌಡರು ನಾಟಕ ಕಲಾವಿದರನ್ನು ಒಗ್ಗೂಡಿಸುವ ಕೆಲಸಕ್ಕೆ ಕೈ ಹಾಕಿ ತಮ್ಮ ಗ್ರಾಮ ಜೋಳದರಾಶಿಯಲ್ಲಿಯೇ ಕನ್ನಡ ನಾಟಕ ಕಲಾಪರಿಷತ್ತು ಏರ್ಪಡಿಸಿದರು. ಆಗ ಇದರ ಅಧ್ಯಕ್ಷತೆ ವಹಿಸಿದ್ದವರು ಪ್ರಖ್ಯಾತ ಕಲಾವಿದ ಗರೂಡ ಸದಾಶಿವರಾಯರು. ರಂಗ ದಿಗ್ಗಜ ಗುಬ್ಬಿವೀರಣ್ಣನವರು ಉದ್ಘಾಟಿಸಿದ ಈ ಪರಿಷತ್ತಿನಲ್ಲಿ ಕನ್ನಡದ ಅತಿರಥ ಮಹಾರಥರೆಲ್ಲರೂ ಪಾಲ್ಗೊಂಡಿದ್ದೊಂದು ವಿಶೇಷ.

ನಾಟಕ ಪ್ರದರ್ಶನಗಳಿಲ್ಲದ ಸಮಯದಲ್ಲಿ ಗಮಕ ಕಾರ್ಯಕ್ರಮಗಳನ್ನು ನೀಡುವುದನ್ನು ರೂಢಿ ಮಾಡಿಕೊಂಡ ಗೌಡರು ನಾಡಿನ ಪ್ರಮುಖ ಊರುಗಳಲ್ಲಿ ಸಂಚರಿಸಿದರು. ದೊಡ್ಡನ ಗೌಡರು ಬಳ್ಳಾರಿಯಲ್ಲಿ (1950), ಕಣೇತಲ್ಲಿ (1953)ಯಲ್ಲಿ ಕನ್ನಡ ನಾಟಕ ಕಲಾ ಪರಿಷತ್ತಿನ ಸಮ್ಮೇಳನಗಳನ್ನು ಏರ್ಪಡಿಸಿದರು. ಸೊಲ್ಲಾಪುರದ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ ಗಮಕ ವಿಚಾರಗೋಷ್ಠಿ ಅಧ್ಯಕ್ಷತೆ ಹಾಗೂ ಗೋಕಾಕ್‌ನಲ್ಲಿ ಜರುಗಿದ ಜನಪದ ಸಾಹಿತ್ಯ ಸಮ್ಮೇಳನದ ಅಧ್ಯಕತೆ ವಹಿಸಿದ್ದರು.

ಗಮಕ ಕ್ಷೇತ್ರದಲ್ಲಿನ ಸೇವೆಗಾಗಿ ಅನೇಕ ಗೌರವ ಪುರಸ್ಕಾರಗಳಿಗೆ ಪಾತ್ರರಾದ ಗೌಡರಿಗೆ ಆಂಧ್ರ ನಾಟಕ ಕಲಾಪರಿಷತ್ತಿನ ಅನಂತಪುರ ಸಮ್ಮೇಳನದಲ್ಲಿ 'ವಿಜಯ ಪತ್ರ' ಗೌರವ ಪ್ರಧಾನ ಮಾಡಲಾಯಿತು. ಪಾತ್ರಗಳಿಗೆ ಜೀವ ತುಂಬಿ, ಸಂಗೀತದಲ್ಲೂ ಪಾರಂಗತರೆನ್ನಿಸಿಕೊಂಡು ಕನ್ನಡ ಸಾಂಸ್ಕೃತಿಕ ರಂಗದ ಅನನ್ಯ ತಾರೆಯಾಗಿ ಬೆಳಗಿದವರು ಜೋಳದರಾಶಿ ದೊಡ್ಡನಗೌಡರು.

ಚಿತ್ರ : ಬಳ್ಳಾರಿ ನಾಗರಾಜ